<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರು ಕನಕಪುರ ಇವರ ನ್ಯಾಯಾಲಯದಲ್ಲಿ</u>

**ಸಿಸಿ ಸಂಖ್ಯೆ : 1689/2022**

**ಪಿರ್ಯಾದುದಾರರು :** ರಾಜ್ಯದ ಪರ ಕನಕಪುರ ಸಂಚಾರಿ ಪೊಲೀಸ್ ಠಾಣೆ

– ವಿರುದ್ದ –

**ಆರೋಪಿತರು :** ಅಬ್ದುಲ್ ಅಜೀಜ್

ಬಿನ್ ಇಬ್ರಾಹಿಂ ರಾವತ್

65 ವರ್ಷ, ಕೋಯಮುತ್ತೂರು, ತಮಿಳುನಾಡು

## <u>ಆಪಾದನೆ</u>

**ಶ್ರೀಮತಿ. ಲತಾಶ್ರೀ ಬಿ.ಎ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ಆಪಾದನೆ ಏನೆಂದರೆ:-**

ದಿನಾಂಕ 13.03.2020 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಮಾನ್ಯ ನ್ಯಾಯಾಲಯದ ವಾಪ್ತಿ, ಕನಕಪುರ ಸಂಚಾರಿ ಪೊಲೀಸ್ ಠಾಣೆ ಸರಹದ್ದು ಕನಕಪುರ ತಾಲ್ಲೂಕು ಪಡುವಣಗೆರೆ ಕ್ರಾಸ್ ಬಳಿಯ ಕನಕಪುರ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ರಸ್ತೆ ನಂ. 209 ರಲ್ಲಿ ಆರೋಪಿಯಾದ ನೀವು ಟ್ರಕ್ ನಂಬರ್ TN 33 AJ 1188ರ ಚಾಲಕನಾಗಿದ್ದು ಟ್ರಕನ್ನು ಬೆಂಗಳೂರು ಕಡೆಯಿಂದ ಕನಕಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕನಕಪುರದ ಕಡೆಯಿಂದ ಅಂಕಣ-14ರ ಸಾಕ್ಷಿ-1 ರವರ ಸಹೋದರ ಮುತ್ತರಾಜು ಚಾಲನೆ ಮಾಡಿಕೊಂಡು ಬರುತ್ತಿದ್ದ TN 70 AA 3767 Hero Splendor motor cycle ಗೆ ಡಿಕ್ಕಿ ಹೊಡೆಸಿದ ಪರಿಣಾಮ ಅಪಘಾತವಾಗಿರುತ್ತದೆ. ಅಪಘಾತದಲ್ಲಿ ಮೋಟಾರ್ ಸೈಕಲ್ ಚಾಲಕ ಮುತ್ತರಾಜು ರವರ ಮುಖ, ಎದೆ ಮತ್ತು ಕೈ ಕಾಲು ದೇಹಕ್ಕೆ ತೀವ್ರವಾದ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆಂತ ತನಿಖೆಯಿಂದ ದೃಡಪಟ್ಟಿರುತ್ತದೆ

ದಿನಾಂಕ 05.08.2021 ರಂದು ಬೆಳಿಗೆ, 07-00 ಗಂಟೆಯಲ್ಲಿ ಮಾನ ನ್ಯಾಯಾಲಯದ ವ್ಯಾಪ್ತಿ, ಕೋಡಿಹಳ್ಳಿ, ಪೊಲೀಸ್ ಠಾಣೆ ಸರಹದ್ದು ಕನಕಪುರ ತಾಲ್ಲೂಕು, ಕೋಡಿಹಳ್ಳಿ, ಹೋಬಳಿ, ಹೇರಂದಾಪನಹಳ್ಳಿ, ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇಸ್ಥಾನದ ಮುಂದಿನ ಬನಹಳ್ಳಿ-ಕೋಡಿಹಳ್ಳಿ, ಮಾರ್ಗದ ರಸ್ತೆಯಲ್ಲಿ, ಆರೋಪಿಯಾದ ನೀವು KA 42 B 2179 ಅಶೋಕ್ ಲೈ ಲ್ಯಾಂಡ್ ಗೂಡ್ಸ್ ವಾಹನ ಕೋಳಿ ತುಂಬಿದ ವಾಹನ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಬಳಿ ನಡೆದುಕೊಂಡು ಹೋಗುತ್ತಿದ್ದ ಚಾಸಾ-1 ವೆಂಕಟೇಶ್ ಜಿ ರವರ ತಾಯಿ ಸಿದ್ದಮ್ಮ ರವರಿಗೆ ಡಿಕ್ಕಿ ಹೊಡೆಸಿದರಿಂದ ಅಪಘಾತವಾಗಿದ್ದು, ಅಪಘಾತದಲ್ಲಿ, ಕಾಲು ಮುರಿದು ತಲೆಗೆ ತೀವು ರಕ್ತಗಾಯವಾಗಿದ್ದ ಸಿದ್ಧಮ್ಮಳನ್ನು ಆರೋಪಿಯಾದ ನೀವೇ ಕನಕಪುರ ಸರ್ಕಾರಿ ಆಸ್ಪತ್ರೆ ಹಾಗೂ ಡಾ. ಚಂದ್ರಮ್ಮ ದಯಾನಂದ ಸಾಗರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲಿ ಚಿಕಿತ್ಸೆ ಕೊಡಿಸುವಾಗೆ, ಚಿಕಿತ್ಸೆ ಫಲಕಾರಿಯಾಗದೆ ಸಿದ್ಧಮ್ಮ ದಿನಾಂಕ 05.08.2021 ರಂದು ಸಂಜೆ 16-18 ಗಂಟೆಯಲ್ಲಿ ಮೃತ ಪಟ್ಟಿ . ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ **279, 304(ಎ)** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

1ನೇ **<u>ಆರೋಪಿಯ ಹೇಳಿಕೆ</u>**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 09.07.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**